**<u>ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಎ.ಬಿ.ಕೆ. ವಕೀಲರಿಂದಃ</u>**

1) ಈ ಪ್ರಕರಣದಲ್ಲಿ ದಿನಾಂಕ 26.2.2026 ರಂದು ನಾನು ಸಲ್ಲಿಸಿರುವ ದಾಖಲಾತಿಗಳನ್ನು ಈಗಾಗಲೇ ಪ್ರತಿವಾದಿಯು ಇದೇ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ದಿನಾಂಕ 26.09.2025 ರಂದು ಸಲ್ಲಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ಸಲ್ಲಿಸಿರುವ ದಾಖಲಾತಿಗಳಿಗೆ ನಾನು ತಕರಾರು ಸಲ್ಲಿಸಿರುತ್ತೇನೆಯೇ ಎಂದು ನನಗೆ ಗೊತ್ತಿಲ್ಲ. ದಿನಾಂಕ 06.07.2022 ರಂದು ಅಸಲು ದಾವಾ ಸಂಖ್ಯೆ 138/2017 ರ ಪ್ರಕರಣದಲ್ಲಿ ಆದೇಶ ಪುಟ ಸಂಖ್ಯೆ 21 ರಲ್ಲಿ ನನ್ನ ವಕೀಲರು ಪ್ರಾಸಾ - 1 ರವರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುವುದಾಗಿ ದಾಖಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಮ್ಮ ವಕೀಲರು ನನ್ನ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತಿಳಿಸಿದ ನಂತರ ಗಿರಿಜಾ ರವರನ್ನು ಎದುರು ವಕೀಲರು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ಈ ಪ್ರಸ್ತುತ ಪ್ರಕರಣದಲ್ಲಿ ಇರುವ ಸ್ವತ್ತುಗಳ ಪೈಕಿ ಸರ್ವೆ ನಂಬರ್ 4/2 ರ ಸ್ವತ್ತಿಗೆ ಮಾತ್ರ ಈ ಮೇಲೆ ಹೇಳಿದ ಅಸಲು ದಾವಾ ಸಂಖ್ಯೆ 138/2017 ರ ಪ್ರಕರಣವನ್ನು ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಮೂರನೇ ಪ್ರತಿವಾದಿಯು ಸರ್ವೆ ನಂ. 16 ರಲ್ಲಿ 23 ಗುಂಟೆ ಮತ್ತು ಖಾನೇಷುಮಾರಿ 2/4 ರಲ್ಲಿನ ಮನೆಯನ್ನು ಸೇರಿಸಿಲ್ಲ ಎಂಬುದಾಗಿ ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ತದನಂತರ ಆ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ನಾವು ಇನ್ನುಳಿದ ಆಸ್ತಿಗಳನ್ನು ಸೇರಿಸಿದ್ದೆವು ಎಂದರೆ ಸರಿಯಲ್ಲ. ಈ ಪ್ರಸ್ತುತ ಪ್ರಕರಣದಲ್ಲಿ ಇರುವ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನನಗೆ ಮತ್ತು ನನ್ನ ಮಕ್ಕಳಿಗೆ ತಿಳಿದಿದ್ದರೂ ಸಹ ಸದರಿ ಸ್ವತ್ತನ್ನು ಹೊಡೆದುಕೊಳ್ಳಲು ಅಸಲು ದಾವಾ ಸಂಖ್ಯೆ 138/2017 ರ ಪ್ರಕರಣವನ್ನು ದಾಖಲಿಸಿ ಅದರಲ್ಲಿ ಈ ಪ್ರಸ್ತುತ ಪ್ರಕರಣದಲ್ಲಿನ ಸ್ವತ್ತನ್ನೂ ಸಹ ಸೇರಿಸಿ ಆಸ್ತಿಯನ್ನು ಹೊಡೆಯಲು ಪ್ರಯತ್ನ ಪಟ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 138/2017 ರ ಪ್ರಕರಣದಲ್ಲಿನ ಸಂಪೂರ್ಣ ದಾಖಲೆಯನ್ನು ನಾನು ಹಾಜರುಪಡಿಸದ ಕಾರಣ ಪ್ರತಿವಾದಿಯು ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**